


ಮಳೆ ಬಂತು ಮಳೆ
ಸೃಷ್ಟಿಯೊಳು ತುಂಬಿತು
ಜೀವ ಕಳೆ
ತುಂಬಿ ಹರಿಯಿತು
ಊರ ಹೊಳೆ
ತೊಳೆದು ಹೊಯಿತು
ತುಂಬಿದ ಕೊಳೆ

ಅರಳಿತು ನೆಲ ಮುಗಿಲ
ಪ್ರೇಮ ಕಲೆ
ಸುರಿದು ಬಂತು
ದೇವನ ಕರುಣ
ಸೆಲೆ

ಮಳೆ ಬಂತು ಮಳೆ
ಅನ್ನದಾತನ ಮೊಗದಲಿ
ನಗುವ ಕಳೆ
ಉಕ್ಕಿ ಬಂದಾವು ಭರವಸೆಗಳ
ಕಾಳು– ಬೆಳೆ
ಜಗವು ಕಂಡುಕೊಂಡಿತು
ಬದುಕುವ ನೆಲೆ.

**-ಕೆ.ಪಿ.ರಾಮಗುಂಡಿ,**
**ಬೈಲಹೊಂಗಲ**

# ತೆಂಗು ನಾನು



ಬಹುಪಯೋಗಿ ತೆಂಗು ನಾನು
ಭುವಿಯ ಕಲ್ಪವೃಕ್ಷ
ಉಳಿಸಿ ಬೆಳೆಸುವಂಥ ಕೈಗೆ
ಕೊಡುವ ಲಕ್ಷ ಲಕ್ಷ

ಶುದ್ಧವಾದ ನೀರ ಕೊಡುವೆ
ಒಡಲೊಳಿಟ್ಟು ನಿಮಗೆ
ಕೊಬ್ರಿ ಜತೆಗೆ ಎಣ್ಣೆ ಉಚಿತ
ಮಾಡಿ ನೋಡಿ ಅಡುಗೆ

ಧರ್ಮ ಕಾರ್ಯಗಳಿಗೆ ಬೇಕು
ದೇವಸ್ಥಾನಗಳಿಗೂ ಕೂಡಾ
ತಿಂಡಿ ತಿನಿಸು ಮಾಡಿಕೊಂಡು
ಸವಿಯಬಹುದು ರುಚಿಗೂ

ನಾರಿನಿಂದ ಮಾಡಬಹುದು
ಹತ್ತು ಹಲವು ವಸ್ತು
ಚಿಪ್ಪಿಗಿಷ್ಟು ಬಣ್ಣ ಕೊಡಲು
ಮನೆಯ ಅಂದ ಮಸ್ತು

ಬೊಡ್ಡೆಯನ್ನು ಕಂಬದಂತೆ
ನಿಲಿಸಬಹುದು ಕುಟಿಗೆ
ಸೂರಿಗಿಷ್ಟು ಗರಿಯ
ನೆರಳು ನಿಮ್ಮ ಮನೆಗೆ

ಜಲದ ಮೂಲ ಪತ್ತೆ ಮಾಡಿ
ತೋರಬಲ್ಲೆನಲ್ಲ
ಇಂಥ ನನ್ನ ರಕ್ಷಿಸಲು
ನಿಮಗೆ ಲಾಭ ಬಹಳ

**-ಅಮೃತೇಶ್ ತಂಡರ,**
**ಅಣ್ಣಿಗೇರ**